ಟೈಮ್ಸ್ ಆಫ್ ಕರ್ನಾಟಕ
ಪ್ರಧಾನ ಸಂಪಾದಕ ಕೆ.ಎಸ್. ಭಾಸ್ಕರ್ ಶೆಟ್ಟಿ ಸಾರಥ್ಯದಲ್ಲಿ, 6ನೇ ವರ್ಷ...
ನಾಡಿನ ಹೆಮ್ಮೆ · ಸುವರ್ಣ · ಕನ್ನಡ ದಿನಪತ್ರಿಕೆ

**Friday 23th December 2022, Page No.02**

**Workshop on Technical Science at RVCE**

# ಆರ್‌ವಿ ಕಾಲೇಜಲ್ಲಿ ತಾಂತ್ರಿಕ ವಿಜ್ಞಾನ, ನವೀಕರಣ ಕುರಿತು ಕಾರ್ಯಾಗಾರ



**ಕೆಂಗೇರಿ:** ಆರ್.ವಿ ಕಾಲೇಜಿನಲ್ಲಿ ಸುಸ್ಥಿರ ಪರಿಹಾರಕ್ಕೆ ಗಣಕ ವ್ಯವಸ್ಥೆ, ಮಾಹಿತಿ ತಂತ್ರಜ್ಞಾನ ಎಂಬ ಹೊಸ ಯುಗದ ತಾಂತ್ರಿಕ ವಿಜ್ಞಾನ ಹಾಗೂ ನವೀಕರಣದ ಕುರಿತು ಮೂರು ದಿನದ ಕಾರ್ಯಾಗಾರ ಆಯೋಜಿಸಲಾಗಿತ್ತು. ಮೈಸೂರು ಮುಖ್ಯರಸ್ತೆಯಲ್ಲಿನ ಆರ್.ವಿ ಕಾಲೇಜಿನಲ್ಲಿ 6ನೇ ಅಂತರರಾಷ್ಟ್ರೀಯ ಸಮ್ಮೇಳನ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಜಾಗತಿಕ ಫೌಂಡರೀಸಿನ ಇಂಟರ್ ನೆಟ್ ಪ್ರೋಟೋಕಾಲ್ ಅಭಿವೃದ್ಧಿ ಮತ್ತು ವಿನ್ಯಾಸದ ಸಿಇಒ ಡಾ.ದಿವೇಶ್ ದ್ವಿವೇದಿ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ಮನಸ್ಸಿನ ಕುತೂಹಲ ಸ್ಪರ್ಶಿಸುವ ರೀತಿ ಪ್ರಾತ್ಯಕ್ಷಿಕೆಗಳ ಮೂಲಕ ಉದ್ಯಮ ತಜ್ಞರು ಕಾರ್ಯಾಗಾರದಲ್ಲಿ ವಿವರಿಸಲಿದ್ದಾರೆ ಎಂದರು.

ಪ್ರತಿಷ್ಠಿತ ಫ್ಲೋರಿಡಾ ವಿ.ವಿ ಪ್ರಾಧ್ಯಾಪಕ ಪ್ರೊ.ಎಸ್.ಎಸ್.ಅಯ್ಯಂಗಾರ್ ಕಾರ್ಯಾಗಾರದ ಸಮಗ್ರ ವಿವರವುಳ್ಳ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ತಜ್ಞರ ನಡುವೆ ಬೌದ್ಧಿಕ ಚರ್ಚೆ ಉತ್ತೇಜಿಸುವ ಮೂಲಕ ಶಿಕ್ಷಣ ಮತ್ತು ಉದ್ಯಮದ ಪ್ರಪಂಚ ಒಟ್ಟುಗೂಡಿಸುವ ಗುರಿ ಹೊಂದಲಾಗಿದ್ದು, ಸಂವಾದಗಳು ಕಿರಿಯ ಮನಸ್ಸುಗಳಿಗೆ ಉದ್ದೇಶ ಮತ್ತು ನಿರ್ದೇಶನದ ಪ್ರಜ್ಞೆ ಒದಗಿಸಲು ಸಹಾಯ ಮಾಡುತ್ತದೆ ಎಂದರು.

ಭಾರತೀಯ ಐಬಿಎಂ ಸಂಶೋಧನೆ ವಿಭಾಗದ ಡಾ.ಎಲ್.ವೆಂಕಟ ಸುಬ್ರಮಣ್ಯಂ, ಪ್ರಾಧ್ಯಾಪಕಿ ಪ್ರೊ. ಡಾ.ದೀಪಾಶೆಣೈ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟಿನ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಉಪಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ, ಇತರರಿದ್ದರು.